**ದಿನಾಂಕಃ 28.01.2026 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.**

**ಪಾಟೀಸವಾಲು : ಪ್ರತಿವಾದಿಯ ಪರ ವಕೀಲರಿಂದಃ**

1. ನಾನು 3 ನೇ ತರಗತಿವರೆಗೆ ವಿದ್ಯಾಭ್ಯಾಸ ಮಾಡಿದ್ದೇನೆ. ವಾದಿ ನನಗೆ ಸಂಬಂಧಿಕಳಲ್ಲ. ವಾದಿಯ ಜಮೀನಿನ ಪಕ್ಕದಲ್ಲಿ ಬೇರೆ ಜಮೀನನ್ನು ನಾನು ಗುತ್ತಿಗೆ ವ್ಯವಸಾಯ ಮಾಡುವುದರಿಂದ ವಾದಿ ಪರಿಚಯವಾಗಿದ್ದಾರೆ. ವಾದಿಯ ಜಮೀನಿನ ಸರ್ವೇ ನಂಬರ್ ಏನು? ಎಂದರೆ ನನಗೆ ಗೊತ್ತಿಲ್ಲ. ವಾದಿಗೆ ಜಮೀನು ಇಲ್ಲದಿದ್ದರೂ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ನಾನು ವರಲಹಳ್ಳಿಯ ಕರಿಬಸಪ್ಪನ ಜಮೀನನ್ನು ಗುತ್ತಿಗೆ ಮಾಡುತ್ತಿದ್ದೇನೆ. ನಾನು ವಾಸ ಮಾಡುವ ವರಕನಹಳ್ಳಿಯಿಂದ ವಾದಿ ವಾಸ ಮಾಡುವ ವರಲಹಳ್ಳಿ ನಡುವೆ ಸುಮಾರು 16 ಕಿ.ಮೀ ಅಂತರವಿರುತ್ತದೆ. ಪ್ರತಿವಾದಿ ಹಣ ಕೇಳಿದ ಬಗ್ಗೆ ನನಗೆ ವಾದಿಯೇ ತಿಳಿಸಿದ್ದರು. ಪ್ರತಿವಾದಿಯು ರೂ.8 ಲಕ್ಷ ಸಾಲ ಕೇಳಿದ್ದರೆಂದು ವಾದಿಯು ತನ್ನ ಬಳಿ ರೂ. 6 ಲಕ್ಷ ಮಾತ್ರ ಇದೆ ಎಂದು ಹೇಳಿದ್ದರು (ಸಾಕ್ಷಿಗೆ ವಾದಿಯು ಸದರಿ ರೂ. 6 ಲಕ್ಷ ಮೊತ್ತವನ್ನು ಬ್ಯಾಂಕಿನಿಂದ ಬಿಡಿಸಿ ತಂದಿದ್ದರೇ? ಮನೆಯಿಂದ ತಂದಿದ್ದರೇ? ಎಂಬ ಪ್ರಶ್ನೆಗಳನ್ನು ಕೇಳಿದ್ದು, ಈ ಸಾಕ್ಷಿಯು ಪ್ರಾಮಿಸರಿ ಪತ್ರಕ್ಕೆ ಸಾಕ್ಷಿ ಸಹಿ ಮಾಡಿದ ಬಗ್ಗೆ ಸಾಕ್ಷಿ ಹೇಳುತ್ತಿರುವ ಕಾರಣ ಸಾಲದ ಮೊತ್ತವನ್ನು ಎಲ್ಲಿಂದ ತಂದಿದ್ದರು ಎಂಬ ಪ್ರಶ್ನೆಗಳು ಈ ಸಾಕ್ಷಿಗೆ ಸಮಂಜಸವಲ್ಲವಾದ್ದರಿಂದ ಪ್ರಾಮಿಸರಿ ಪತ್ರದ ಬಗ್ಗೆ ಪಾಟೀಸವಾಲನ್ನು ಕೇಂದ್ರೀಕರಿಸುವಂತೆ ಸೂಚಿಸಲಾಗಿದೆ).

2. ಹಣವನ್ನು ದಿನಾಂಕ 20.05.2021 ರಂದು ಕೊಟ್ಟಿದ್ದರು. ರೂ. 6 ಲಕ್ಷ ಕೊಟ್ಟಿದ್ದರು. ಹಣ ಕೊಟ್ಟಾಗ ಪ್ರತಿವಾದಿ ವಿಜಯಕುಮಾರ್, ವಾದಿ ಕೊಟ್ರಮ್ಮ, ಮಲ್ಲಪ್ಪ, ವೀರಣ್ಣ ಮತ್ತು ಶಾಂತಪ್ಪನಾದ ನಾನು ಇದ್ದೆವು. ಹಣವನ್ನು ಯಾವ ಜಾಗದಲ್ಲಿ ಕೊಟ್ಟರು? ಎಂದರೆ ಹಗರಿಬೊಮ್ಮನಹಳ್ಳಿ ತಾಲ್ಲೂಕು ಕಚೇರಿ ಹತ್ತಿರ ಇರುವ ಆಂಜನೇಯನ ದೇವಸ್ಥಾನದಲ್ಲಿ ಹಣ ಕೊಟ್ಟರು. ಎಲ್ಲವೂ ರೂ.500 ರ ಮುಖ ಬೆಲೆಯ ಕರೆನ್ಸಿ ನೋಟುಗಳಲ್ಲಿ ಹಣ ಕೊಟ್ಟರು. ತಾಲ್ಲೂಕು ಕಚೇರಿಯ ಬಳಿ ಸುಮಾರು 50-100 ಜನ ಯಾವಾಗಲೂ ಇರುತ್ತಾರೆ ಎಂದರೆ ಇಲ್ಲ, ಆಗ ಕೋವಿಡ್ ಇದ್ದಿದ್ದರಿಂದ ಬರೀ 8-10 ಜನ ಮಾತ್ರ ಇದ್ದರು. ನಾನು ಆ ದಿನ ನಮ್ಮ ಊರಿನಿಂದ ಬೆಳಗ್ಗೆ 8-8.30 ಕ್ಕೆ ಹೊರಟು ಹಗರಿಬೊಮ್ಮನಹಳ್ಳಿಗೆ ಬೆಳಗ್ಗೆ 9.30 ಗಂಟೆಗೆ ಬಂದಿದ್ದೆ. ಪ್ರಾಮಿಸರಿ ಪತ್ರವನ್ನು ಬರವಣಿಗೆ ಮಾಡಿದ ನಂತರ ಪ್ರತಿವಾದಿ ವಿಜಯಕುಮಾರ್, ವಾದಿ ಕೊಟ್ರಮ್ಮ, ಮಲ್ಲಪ್ಪ, ಈರಣ್ಣ ಮತ್ತು ನಾನು ಸಹಿ ಮಾಡಿದೆವು. ಬರವಣಿಯಾದ ನಂತರವೇ ಎಲ್ಲರೂ ಸಹಿ ಮಾಡಿದರು. ಆಗ ಕೋವಿಡ್ ಇದ್ದಿದ್ದರಿಂದ ನಾನು ಮನೆಯಿಂದ ಹೊರಕ್ಕೆ ಹೋಗಿರಲೇ ಇಲ್ಲವಾದರೂ ವಾದಿಯ ಮಾತು ಕೇಳಿ ಆಕೆಗೆ ಸಹಾಯ ಮಾಡಲು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿ ವಿಜಯಕುಮಾರ್ ವಾದಿಯಿಂದ ಯಾವುದೇ ಹಣವನ್ನೂ ಪಡೆದಿಲ್ಲ ಎಂದರೆ ಪಡೆದಿದ್ದಾರೆ. ನಾನು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿಯನ್ನು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ 1 ರಲ್ಲಿ ತಿದ್ದುಪಡಿ ಆದ ನಂತರ ನಾನು ಅದಕ್ಕೆ ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಗಿದೆ)

ಓ.ಹೇ.ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ
ಜೆ.ಎಂ.ಎಫ್.ಸಿ. ಹಗರಿಬೊಮ್ಮನಹಳ್ಳಿ